ನಿಂತು ನಿಶ್ಯಬ್ದಗೊಂಡಂತೆ ದೇಹ ನಿಶ್ಚಲಗೊಳ್ಳುತ್ತಿರುವಂತೆ; ಯಾವುದೋ ದೇಹದೊಳಕ್ಕೆ ನನ್ನ ದೇಹ ತೂರಿಕೊಂಡು ಮಂಪರಿನ ಹಬೆಯಲ್ಲಿ ಮುಳುಗಿದಂತೆ... ಬೆಚ್ಚಗೆ ನಿದ್ದೆಗೆ ಜಾರಿಬಿಟ್ಟಿದ್ದೆ.

ರೂಮಿನ ಬಾಗಿಲು ದಢದಢ ಬಡಿದಂತಾಗಿ ಎಚ್ಚರವಾಗಿತ್ತು. ಅರೆ, ಗೋಡೆಗಂಟಿದ ಗಡಿಯಾರ ಏಳೂವರೆ ತೋರಿಸುತ್ತಿದೆ. ಎಂದಿಗಿಂತಲೂ ದೇಹ ಹಗುರವಾಗಿರುವಂಥ ಅನುಭವ. ಸಾಮಾನ್ಯವಾಗಿ ಪ್ರತಿನಿತ್ಯ ಬೆಳಿಗ್ಗೆ ಆರುಗಂಟೆಗೆ ಎದ್ದೇಳುವ ರೂಢಿ. ರೂಮಿನ ಬಾಗಿಲಿನ ಚಿಲಕವನ್ನು ಸಾಮಾನ್ಯವಾಗಿ ಹಾಕುತ್ತಿರಲಿಲ್ಲವಾದ್ದರಿಂದ ನನಗೇ ಒಂದು ರೀತಿಯ ಅಚ್ಚರಿಯಾಗಿತ್ತು. ಬಾಗಿಲು ತೆರೆದವನಿಗೆ ನನ್ನ ಹೆಂಡತಿ ಕಾಫಿ ಹಿಡಿದು ನಿಂತಿರುವುದು ಕಾಣಿಸಿತು. ನನ್ನನ್ನೇ ಅಡಿಯಿಂದ ಮುಡಿಯವರೆಗೂ ದೃಷ್ಟಿಸಿದವಳು ಮುಖವನ್ನು ಹುಳಿಹುಳಿ ಮಾಡಿಕೊಂಡು, “ಏನ್ರಿ ಇದು ನಿಮ್ಮ ಅವತಾರ, ನಂಗೆ ಭಯನೇ ಆಗೋಯ್ತು... ಮೊದ್ಲು ಕನ್ನಡೀಲಿ ನೋಡ್ಕಳಿ...” ಎಂದಿದ್ದಳು. ನಾನು ಕಾಫಿ ಕುಡಿಯುತ್ತ ಕನ್ನಡಿಯಲ್ಲಿ ಇಣುಕಿದ್ದೆ. ನನ್ನದೇ ಮಾಮೂಲಿ ಪ್ರತಿಬಿಂಬ. ಹೆಂಡತಿ ಹೇಳಿದಂತೆ ಎಂಥ ಅವತಾರವೂ ನನ್ನ ಶರೀರದಲ್ಲಿ ನನಗೆ ಗೋಚರಿಸಲಿಲ್ಲ. ಆದರೆ ರಾತ್ರಿ ಕನಸಿನ ನಂತರ ಶರೀರದಲ್ಲಾದ ವಿಚಿತ್ರ ತಲ್ಲಣಗಳ ಅನುಭವ ನೆನಪಾಗಿ ಮನಸ್ಸು ಮತ್ತು ದೇಹದಲ್ಲಿ ಒಂದಿಷ್ಟು ಡಿಸ್ಟರ್ಬೆನ್ಸ್ ಆಗಿರಬಹುದೆಂಬ ಗುಮಾನಿಯ ಚಹರೆ ಉಂಟಾಗಿತ್ತು.

ಕಾಫಿ ಕುಡಿದು ವಾಕಿಂಗ್ ಹೊರಟಾಗ ಹೆಂಡತಿ ಅಡುಗೆ ಕೋಣೆಯಲ್ಲಿ ಬಿಜಿಯಾಗಿದ್ದಳು. ನಾನು ಎಂಥ ಸಂದರ್ಭದಲ್ಲೂ ನಿತ್ಯದ ವಾಕಿಂಗ್ ಮಾಡುವುದನ್ನು ತಪ್ಪಿಸುವವನಲ್ಲ. ಐದು ನಿಮಿಷಗಳ ನಡಿಗೆಯ ದೂರವಿರುವ ನಮ್ಮ ಬಡಾವಣೆಯ ಗಾಂಧಿ ಪಾರ್ಕಲ್ಲಿ ಸರಿಯಾಗಿ ನಲವತ್ತು ನಿಮಿಷ ವಾಕ್ ಮಾಡುತ್ತೇನೆ. ಬೆಳಗಿನ ವಾಕ್ ಆರೋಗ್ಯಕ್ಕೆ ಅತ್ಯಂತ ಉಪಯೋಗಕಾರಿಯೂ, ಆಹ್ಲಾದಕರವಾಗಿಯೂ ಆಗಿರುವುದಲ್ಲದೆ ಪಾರ್ಕಿನಲ್ಲಿ ವಾಕ್ ಮಾಡುವ ವಿರುದ್ಧ ಲಿಂಗೀಯ ಜನರನ್ನು ನೋಡುವುದೂ ಕಣ್ಣಿಗೆ ಚೇತೋಹಾರಿಯಾದ ಸಂಗತಿಯೇ ಸರಿ. ಇಂದು ತಡವಾದರೂ ಒಂದಿಪ್ಪತ್ತು ನಿಮಿಷ ವಾಕ್ ಮಾಡಿ ಬರೋಣವೆಂದು ರಸ್ತೆಗಿಳಿದವನಿಗೆ ನಮ್ಮ ಬೀದಿಯ ಪ್ರೊಫೆಸರ್ ಪದ್ಮನಾಭ ಎದುರಾಗಿದ್ದರು. ಮಾಮೂಲಿಯಾಗಿ, “ನಮಸ್ತೆ ಪ್ರೊಫೆಸರ್...” ಎಂದು ಕೈ ಎತ್ತಿ ನಗು ತೇಲಿಸಿದ್ದೆ. ಪ್ರೊಫೆಸರ್ ಒಂದು ರೀತಿ ಗುರುತು ಇಲ್ಲದವರಂತೆ ದೃಷ್ಟಿಸಿ “ಓಹ್ ಗಾಂಧಿಯವರು, ಏನೋ ಬದಲಾವಣೆ ಆದಂತೆ ಕಾಣ್ತೀರಲ್ಲ. ಹುಷಾರ್ ಗಿಷಾರ್ ತಪ್ಪಿದ್ದೀರೋ ಹೇಗೆ...” ಎಂದು ನಕ್ಕು ಮುಂದೆ ಸಾಗಿದ್ದರು. ಪ್ರೊಫೆಸರ್ ನಮ್ಮ ಏರಿಯಾದಲ್ಲಿ ಸ್ವಲ್ಪ ಫೇಮಸ್ ಆಗಿದ್ದಾರೆ. ಏರಿಯಾದ ಎಲ್ಲಾ ಕಾರ್ಯಕ್ರಮಗಳಿಗೂ ಭಾಷಣಕಾರರನ್ನಾಗಿ ಪ್ರೊಫೆಸರನ್ನು ಕರೆಯುತ್ತಾರೆ. ಪ್ರೊಫೆಸರ್ ಭಾಷಣದ ಪ್ರಮುಖ ವಸ್ತು ಭ್ರಷ್ಟಾಚಾರ. ಭ್ರಷ್ಟಾಚಾರಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಳ್ಳುತ್ತಾರೆ. ಅವರಿಗೆ ನನ್ನ ಮೇಲೂ ಒಂದು ಕಣ್ಣು. ಕೆಲವರು ಹೆಸರಿಗೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಾರೆ ಎಂದು ನನ್ನನ್ನೇ ಗುರಿಯಾಗಿಟ್ಟುಕೊಂಡು ನನ್ನ ಬಳಿಯೇ ಅನೇಕ ಸಾರಿ ಪ್ರೊಫೆಸರ್ ಮಾತನಾಡಿದ್ದುಂಟು. ಪಾರ್ಕ್‌ನಲ್ಲೂ ಜನ ನನ್ನನ್ನು ಕುತೂಹಲದಿಂದಲೇ ನೋಡಿದ್ದರು. ಕೆಲವು ಮಕ್ಕಳು, ‘ಅಯ್ ಗಾಂಧಿ, ಅಯ್ ಗಾಂಧಿ...’ ಎಂದು ನನ್ನ ಕಡೆ ನೋಡಿ ಕೂಗಾಡಿದ್ದರು. ಒಬ್ಬ ವ್ಯಕ್ತಿ, “ಏಯ್ ಯಾಕ್ ಅರಚ್ತೀರೋ ಅವರ ಹೆಸರೇ ಗಾಂಧಿ...” ಎಂದು ಮಕ್ಕಳನ್ನು ಗದರಿಕೊಂಡಿದ್ದರು.

ವಾಕ್ ಮುಗಿಸಿ, ಆಫೀಸಿಗೆ ಹೋಗಲು ರೆಡಿಯಾಗಿದ್ದೆ. ಸಾಮಾನ್ಯವಾಗಿ ಒಂಬತ್ತೂವರೆಗೆಲ್ಲ